ಇ. ಹೌದು, ತಿಪಟೂರು ತಾಲ್ಲೂಕಿನ ಕೆಲವು ಭಾಗಗಳಲ್ಲಿ.

ಈ. ಅಂತಹ ಬೇಡಿಕೆಗಳು ಸರ್ಕಾರಕ್ಕೆ ಬಂದಿಲ್ಲ. ಮುಂದೆ ಬಂದ ರೈತರಿಗೆ ಕಲಸ ಒದಗಿಸುವ ಸಲುವಾಗಿ ಸಾಕಷ್ಟು ಅಭಾವ ಪರಿಹಾರ ಕಾಮಗಾರಿಗಳನ್ನು ತೆಗೆದುಕೊಳ್ಳಲಾಗಿದೆ.

ಶ್ರೀ ಗಂಗಾಧರಪ್ಪ.—ತಿಪಟೂರು ತಾಲ್ಲೂಕಿನಲ್ಲಿ ತಿಂಗಳಾನುಗಟ್ಟಲೆ ಕೆಲಸಕಾರ್ಯಗಳು ನಡೆಯದೆ ನಿಂತಿವೆ. ಜಿಲ್ಲಾಧಿಕಾರಿಗಳನ್ನು ಕೇಳಿದರೆ ನಾವು ಹಣ ಬಿಡುಗಡೆ ಮಾಡಿದ್ದೇವೆಂದು ಹೇಳುತ್ತಾರೆ ಆದರೆ, ತಾಲ್ಲೂಕು ಬೋರ್ಡುಗಳಿಗೆ ದುಡ್ಡು ಬಂದಿಲ್ಲ: ಇದನ್ನು ಶೀಘ್ರವಾಗಿ ಸರಿಮಾಡುವುದಕ್ಕೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ?

ಶ್ರೀ ವಿ. ಎಲ್. ಪಾಟೀಲ್.—ಮೊದಲನೆಯದಾಗಿ, ಕೇಂದ್ರ ಸರ್ಕಾರದಿಂದ ನಮಗೆ ಬರಬೇಕಾದ ಹಣ ಬಂದಿಲ್ಲ. ಈಗ ಅಲ್ಲಲ್ಲ ನುಳೆಯಾಗಿರುವುದರಿಂದ ಜನಗಳು ಬಿತ್ತನೆ ಕಾರ್ಯದಲ್ಲಿ ತೊಡಗಿದ್ದಾರೆ. ಸರಿಗೆ ಕೆಲಸದ ಅವಶ್ಯಕತೆ ಇದ್ದರೆ ಕೆಲಸ ಕೊಡುತ್ತೇವೆ.

ಶ್ರೀ ಗಂಗಾಧರಪ್ಪ.—ಜನಗಳು ಕೆಲಸ ಇಲ್ಲದೆ ಬಹಳ ತೊಂದರೆ ಪಡುತ್ತಿದ್ದಾರೆ. ಜನಗಳಲ್ಲಿ ಆಹಾಕಾರ ಎದ್ದಿದೆ: ಕ್ಷಾಮಪರಿಹಾರಕ್ಕಾಗಿ ತಾವು ಏನು ವ್ಯವಸ್ಥೆ ಮಾಡುತ್ತೀರಿ ? ಈ ವಿಷಯವನ್ನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೂ ತರಬೇಕಾಗಿದೆ.

ಶ್ರೀ ವಿ. ಎಲ್. ಪಾಟೀಲ್.—ವ್ಯವಸ್ಥೆ ಮಾಡಲಿಕ್ಕೆ ಪ್ರಯತ್ನ ಮಾಡುತ್ತೇನೆ.

ಸದಸ್ಯರು.—ತೆಂಳು ಹಾಗೂ ಆಡಿಕೆ ಮರಗಳು ಮಳೆ ಇಲ್ಲದೆ ಒಣಗಿ ಹೋಗಿವೆ. ಈ ಕ್ಷಾಮವನ್ನು ತಡೆಗಟ್ಟಬೇಕಾದರೆ ನೀರು ನಿಲ್ಲುವಂತೆ ಪಿಕಪೆಗಳನ್ನು ಹಾಕಿಸುವ ಯೋಜನೆ ಮಾಡಬೇಕು.

ಶ್ರೀ ವಿ.ಎಲ್. ಪಾಟೀಲ್.—ಮಾನ್ಯ ಸದಸ್ಯರ ಸಲಹೆಯನ್ನು ಪರಿಶೀಲನೆ ಮಾಡುತ್ತೇನೆ.

ವಿಷಯ :— ಗುಳೇದಗುಡ್ಡ ನಗರಸಭೆಯ ಅಭಿವೃದ್ಧಿಗಳಿಗೆ ಅನುಧಾನಗಳು

ಪ್ರ. 167(52) ಶ್ರೀ ಮಲ್ಲಿಖಾರ್ಜುನ ವಿ. ಬನ್ನಿ (ಗುಳೇದ್‌ಗುಡ್ಡ).—ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ :—

ಅ. ಗುಳೇದಗುಡ್ಡ ನಗರಸಭೆಗೆ ಅಭಿವೃದ್ಧಿ ಗ್ರಾಂಟ್ 1982–83ನೇ ಸಾಲಿಗೆ ರೂ. 2 ಲಕ್ಷ 50 ಸಾವಿರವನ್ನು ಕೊಡಲು ವಿಭಾಗಾಧಿಕಾರಿ ಬೆಳಗಾವಿ ಸರ್ಕಾರಕ್ಕೆ ಶಿಫಾರಸ್ಸು ಮಾಡಿದ್ದು ಇದು ರಾಜ್ಯ ಸರಕಾರದವರ ಗಮನಕ್ಕೆ ಬಂದಿದೆಯೆ :

ಆ. ಹಾಗಿದ್ದಲ್ಲಿ ಇದರ ವಿವರಗಳೇನು :

ಇ. ಅಭಿವೃದ್ಧಿ ಗ್ರಾಂಟ್ ಬಿಡುಗಡೆ ಮಾಡಲಾಗುವುದೆ :

ಈ. ಇಲ್ಲದಿದ್ದಲ್ಲಿ ಕಾರಣಗಳನ್ನು ತಿಳಿಸುವುದು.

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಹಾಗೂ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಸಚಿವರು :—

ಅ. ಬಂದಿದೆ.

ಆ. ವಿವರ ಹೀಗಿದೆ.

		(ಲಕ್ಷ ರೂಗಳಲ್ಲಿ)
1.	4 ಕಿ.ಮೀ. ರಸ್ತೆಗೆ	1.00
2.	4 ಕಿ.ಮೀ. ಟಾರು ರಸ್ತೆಗೆ	2.50
3.	ಸಾರ್ವಜನಿಕ ಶಾಚಾಲಯ	1.00

ಇ. 1983–84 ವರ್ಷಕ್ಕೆ ಬಿಡುಗಡೆ ಮಾಡಲಾಗುವುದು.

ಈ. ಉದ್ಭವಿಸುವುದಿಲ್ಲ.

ಶ್ರೀ ಮಲ್ಲಿಕಾರ್ಜುನ ವೀರಪ್ಪ ಬನ್ನಿ.—ನಮ್ಮ ಮುನಿಸಿಪಾಲಿಟಿ ಆರ್ಥಿಕ ಪರಿಸ್ಥಿತಿ ಏನು ಎನುವುದು ಸರ್ಕಾರದ ಗಮನಕ್ಕೆ ಬಂದಿದೆ. 4.50 ಲಕ್ಷ ರೂಪಾಯಿಗಳನ್ನು ಕೊಡುತ್ತೇವೆಂದು ಹೇಳಿ ಈಗ 2.50 ಲಕ್ಷಕ್ಕೆ ಇಳಿಸಿದ್ದೀರ, ಇಹಕ್ಕೆ ಕಾರಣ ಏನು ?

ಶ್ರೀ ಎಂ. ಚಂದ್ರಶೇಖರ್.—ಇದು ಸರ್ಕಾರ ಕೊಡಬೇಕಾದ್ದಲ್ಲ: ಅವರು ಅಷ್ಟು ಹಣವನ್ನು ಕೊಡಬೇಕೆಂದು ಕೇಳಿದ್ದಾರೆ; 254 ಮುನಿಸಿಪಾಲಿಗೆ 2 ಕೋಟಿಯಲ್ಲಿ ಹಂಚಿಕೆ ಮಾಡಬೇಕು, ಇದ ಕ್ಕೊಂದು ಪರಿಮಿತಿ ಇರುವುದರಿಂದ ಆರೀತಿ ಕೊಡುವುದಕ್ಕೆ ಸಾಧ್ಯವಾಗುತ್ತಿಲ್ಲ.